ಶ್ರೀ ಪಿ.ಜಿ.ಆರ್. ಸಿಂಧ್ಯಾ :- ದಯಮಾಡಿ ಶೂನ್ಯವೇಳೆಯಲ್ಲಿ ನಡೆದಿರುವ ವಿಷಯದ ಬಗ್ಗೆ, ಯಾವುದು ಪ್ರಚೋದನೆ ಮಾಡುವ ಅಂಶವಿದೆ. ಅಥವಾ ಕಾನೂನು ಬಾಹಿರವಾಗಿದ್ದರೆ, ಸಂವಿಧಾನಬಾಹಿರವಾಗಿದ್ದರೆ, ಅದನ್ನು ತೆಗೆದುಹಾಕುತ್ತೇನೆಂದು ಸಂಜೆಯೊಳಗಡೆ ಒಂದು ರೂಲಿಂಗ್ ಅನ್ನು ಕೊಡಿ. ನಾವು ಒಪ್ಪಿಕೊಳ್ಳುತ್ತೇವೆ. ಇದು ನನ್ನ ನಿವೇದನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇನ್ನೊಂದು ವಿಷಯ, ಅವರು ಹಿರಿಯ ಸದಸ್ಯರಿದ್ದಾರೆ. ನಾನು ಹೇಳಬಾರದು, ಅವರು ನಿಮಗೆ ಸಲಹೆ ಕೊಡಬಹುದೇ ಹೊರತು, ಚೇರ್‌ಗೆ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು :- ಆಯಿತು, I will give a ruling. I will give a Note also from our Secretariat to the press. ನಾವು ಕೊಡುವ ನೋಟ್ ಅನ್ನು ಬೇಕಾದರೆ ಪಬ್ಲಿಷ ಮಾಡಬಹುದು ನನ್ನ ಅಬ್ಯಂತರವಿಲ್ಲ. ಮುಂದಿನ ಪ್ರಶ್ನೆ ಶೂನ್ಯವೇಳೆ.

5. ಅಧ್ಯಕ್ಷ ಅಪ್ಪಣೆ ಮೇರೆಗೆ

(ಅ) ವಿಷಯ: ಕಾಶ್ಮೀರ ಉಗ್ರಗಾಮಿಗಳ ಗುಂಡಿಗೆ ಬಲಿಯಾದ ಬಿಜಾಪುರ ಜಿಲ್ಲೆಯ ಯೋಧನ ಶವದ ಬಗ್ಗೆ ಜಿಲ್ಲಾಡಳಿತ ತೋರಿಸಿರುವ ಅಸಡ್ಡೆ ಬಗ್ಗೆ

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಅಧ್ಯಕ್ಷರೆ, ಒಬ್ಬ ಯೋಧ ಕಾಶ್ಮೀರದಲ್ಲಿ ಉಗ್ರಗಾಮಿಗಳ ಗುಂಡಿಗೆ ಬಲಿಯಾದ ಆ ಯೋಧನ ಶವವನ್ನು ತಂದರೆ, ಜಿಲ್ಲಾಡಳಿತದವರು ಆ ಯೋಧನ ತಂದೆತಾಯಿಗಳಿಗೆ ಸರಿಯಾದ ಮಾಹಿತಿಯನ್ನು ಕೊಡದೆ, ಬಿಜಾಪುರ ಜಿಲ್ಲೆಯಲ್ಲಿ ಬಹಳ ತೊಂದರೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ, ಇವತ್ತು ದೇಶ ಕಾಯುವಂತಹ ಒಬ್ಬ ಯೋಧನ ಬಗ್ಗೆ ಅಸಡ್ಡೆಯನ್ನು ಬಿಜಾಪುರ ಜಿಲ್ಲಾಡಳಿತದವರು ತೋರಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಆ ಬಗ್ಗೆ ತನಿಖೆ ಮಾಡಿ, ಅವರ ಮೇಲೆ ಸರಿಯಾದ ಕಾನೂನಿನ ಕ್ರಮವನ್ನು ಜರುಗಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಆ) ವಿಷಯ:- ಕೋಲಾರದ ಸಿಎಂಸಿಗೆ ಕೊಟ್ಟು ಕಳಪೆ ಕೆಲಸಗಳಾಗಿರುವ ಬಗ್ಗೆ

+ ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ :- ಮಾನ್ಯ ಅಧ್ಯಕ್ಷರೆ, ಎರಡು ವರ್ಷಗಳ ಹಿಂದೆ ನಾನು ಒಂದು ವಿಷಯವನ್ನು ಕೇಳಿದ್ದೆ, ನಗರಗಳಿಗೆ ಒಂದು ಕೋಟಿ ರೂಪಾಯಿಗಳನ್ನು ಹಾಗೂ ಸಿಎಂಸಿಗಳಿಗೆ 50 ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ. ಇವತ್ತು ಕೋಲಾರದಲ್ಲಿ ಕೊಟ್ಟಂಥ ಒಂದು ಕೋಟಿ ರೂ.ಗಳ ಕೆಲಸವನ್ನು ಏನೇನು ಮಾಡಿರುವುದಿಲ್ಲ. ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಕೆಲಸ ಮಾತ್ರ ಪೂರ್ತಿಯಾಗಿದೆ ಹಣವನ್ನು ಡ್ರಾ ಮಾಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ನನಗಂತೂ ಗೊತ್ತಿಲ್ಲ. ಬಹಳಷ್ಟು ಕೆಲಸಗಳನ್ನು ಕಳಪೆ ಮಾಡಿ, ನಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ, ಅದು ನಮಗೆ ಗೊತ್ತೇ ಇಲ್ಲ, ಆ ಹಣವನ್ನು ಮೂನಿಸಿಪಾಲಿಟಿಯವರು ಆ ಹಣವನ್ನು ಸಾಲವಾಗಿ ವಾಪಸ್ಸು ಕೊಡಬೇಕು ಎಂದು ಸರ್ಕಾರದವರು ಒಂದು ಕಂಡಿಷನ್ ಹಾಕಿ ಆ ಹಣವನ್ನು ರಿಲೀಸ್ ಮಾಡಿದ್ದಾರೆ. ಇದುವರೆಗೆ ಆ ಕಳಪೆ ಕೆಲಸಗಳು ಕೋಲಾರದಲ್ಲಿ ಒಂದು ಕೋಟಿ ರೂ.ಗಳ ಕೆಲಸವಾಗಿದೆ. ಆ ಕೆಲಸ ಬಹಳ ಕಳಪೆಯಾಗಿದೆ. ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ